ಕೆರೆಗಳಿಗೆ ನೀರು ತುಂಬಿಸುವುದು

168(467) ಶ್ರೀ ಐಹೊಳೆ ಡಿ.ಮಹಾಲಿಂಗಪ್ಪ(ರಾಯಬಾಗ)

ಅ) ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಬೆಂಡಬಾಡ, ಹೂವಿನಹೊಂಡ, ಮಂಡೂರು ಬೂದಿಹಾಳ ದೇವನಕಟ್ಟಿ, ಮಾಡುಗಿ, ನಂದಕುಳಿ ಹಾಗೂ ಚಿಕ್ಕೋಡಿ ತಾಲ್ಲೂಕು ಕೆಲ ಗ್ರಾಮಗಳ ಕೆರೆಗಳಿಗೆ ನೀರು ತುಂಬುವ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ, ಸದರಿ ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ!

ಆ) ಕುಡಿಯುವ ನೀರಿನ ತೊಂದರೆಯನ್ನು ನಿವಾರಣೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ ಬಿ ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಚಿಕ್ಕೋಡಿ ತಾಲ್ಲೂಕಿನಲ್ಲಿ ನದಿಯಿಂದ ನೀರನ್ನು ಎತ್ತಿ ಕೆರೆ ತುಂಬಿಸುವ ಯೋಜನೆಗಳ ವಿವರಗಳು ಈ ಕೆಳಗಿನಂತಿವೆ.

1. ದೂಧಗಂಗಾ ನದಿಯಿಂದ ನೀರನ್ನು ಎತ್ತಿ ಚಿಕ್ಕೋಡಿ ತಾಲ್ಲೂಕಿನ ಶಿರಗಾಂವ ಬಸವಣ್ಣ ಟ್ಯಾಂಕಿಗೆ ನೀರು ಪೂರೈಸುವುದು ರೂ 315.00 ಲಕ್ಷಗಳ ಅಂದಾಜು ಪತ್ರಿಕೆಗೆ ಅನುಮೋದನೆ ದೊರೆತಿದೆ. ಟೆಂಡರ್ ಸ್ವೀಕೃತ ಹಂತದಲ್ಲಿದೆ.

2. ಕೃಷ್ಣಾ ನದಿಯಿಂದ ನೀರನ್ನು ಎತ್ತಿ ಚಿಕ್ಕೋಡಿ ತಾಲ್ಲೂಕಿನ ಕಾಡಾಪೂರ ಟ್ಯಾಂಕ್‌ಗೆ ನೀರನ್ನು ಪೂರೈಸುವುದು. ರೂ.390.00 ಲಕ್ಷಗಳ ಅಂದಾಜು ಪತ್ರಿಕೆಗೆ ಅನುಮೋದನೆ ದೊರೆತಿದೆ. ಈ ಕಾಮಗಾರಿಗಾಗಿ ಟೆಂಡರ್ ಕರೆದಿದ್ದು, ಟೆಂಡರ್ ಸ್ವೀಕೃತಿ ಹಂತದಲ್ಲಿದೆ.

3. ಹಿರಣ್ಯಕೇಶಿ ನದಿಯಿಂದ ನೀರನ್ನು ಎತ್ತಿ ಹುಕ್ಕೇರಿ ತಾಲ್ಲೂಕಿನ 18 ಕೆರೆಗಳಿಗೆ; ಕರಜಗಾ ಇಂಗು ಕೆರೆ, ಬೋರುಗಲ್ ಇಂಗು ಕೆರೆ ಹರಗಾಪೂರ ಇಂಗು ಕೆರೆ, ಹಿಟ್ನಿ ಇಂಗು ಕೆರೆ, ಅಮ್ಮಣಗಿ ಇಂಗು ಕೆರೆ, ಮತ್ತಿವಾಡ ಕೆರೆ, ಯಲಿಮುನವಳ್ಳಿ ಕೆರೆ, ನಾಗನೂರು ಸ.ನೀ.ಕೆರೆ, ಬೆಳವಿ ಇಂಗುಕೆರೆ, ಕಮತನೂರು ಸ.ನೀ.ಕೆರೆ, ಕೆಸ್ತಿ ಇಂಗುಕೆರೆ, ಭೈರಾಪೂರ ಸ.ನೀ.ಕೆರೆ, ಕಣಗಲಾ ಇಂಗು ಕೆರೆ, ಅಂಗಲಿ (ಸೈಟ–2) ಸ.ನೀ.ಕೆರೆ, ರಾಶೀಂಗ ಸ.ನೀ.ಕೆರೆ, ಸಾರಾಪುರ ಇಂಗು ಕೆರೆ, ಬೆಲ್ಲದ ಬಾಗೇವಾಡಿ ಸ.ನೀ.ಕೆರೆ, ಯಲಿಮುನವಳ್ಳಿ ಇಂಗು ಕೆರೆ (ಹಂಜಾನಟ್ಟಿ), ಹಾಗೂ ಚಿಕ್ಕೋಡಿ ತಾಲ್ಲೂಕಿನ ಮಜಲಟ್ಟಿ, ವಡ್ರಾಳ, ಜೈನಾಪೂರ, ಮುಗುಳಿ ಕೆರೆಗಳನ್ನು ತುಂಬಿಸುವ ಕುರಿತು ಅಂದಾಜು ಪತ್ರಿಕೆ ತಯಾರಿಸಿದ್ದು, ಅಂದಾಜು ಪತ್ರಿಕೆ ಪರಿಶೀಲನಾ ಹಂತದಲ್ಲಿದೆ.

4. ಕೃಷ್ಣಾ ನದಿಯಿಂದ ನೀರನ್ನು ಎತ್ತಿ ರಾಯಬಾಗ ತಾಲ್ಲೂಕಿನ ಬೆಂಡವಾಡ, ಮೇಖಳಿ, ಬೂದಿಹಾಳ, ಸವಸುದ್ದಿ, ದೇವಾಪುರ ಹಟ್ಟಿ, ಮಾವಿನಹೊಂಡ, ಕಟಕಬಾವಿ, ದೇವನಕಟ್ಟಿ, ಕೆಂಪಾಜಲಿ, ಮಿರಕಸಾಲಿ, ಕಪ್ಪಗುದ್ದಿ, ಖನದಾಳ, ಜೋಡಟ್ಟಿ, ಗಿರಿನಾಯಕವಾಡಿಕೆರೆಗಳಿಗೆ ನೀರು ತುಂಬಿಸಲು ಯೋಜಿಸಿದ್ದು, ರೇಖಾ ಅಂದಾಜು ಪ್ರಸ್ತಾವನೆಯನ್ನು ಮುಖ್ಯ ಇಂಜನೀಯರ್ ರವರು ತಯಾರಿಸುತ್ತಿದ್ದಾರೆ.

5. ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ನಂದಿಕುರುಳಿ ಗ್ರಾಮದ ಕೆರೆಯನ್ನು ಕೃಷ್ಣಾ ನದಿಯಿಂದ ಏತ ನೀರಾವರಿ ಮೂಲಕ ಕೆರೆಗಳನ್ನು ನೀರು ತುಂಬಿಸುವ ಪ್ರಸ್ತಾವನೆಯನ್ನು ಮುಖ್ಯ ಇಂಜನೀಯರ್ ರವರು ತಯಾರಿಸುತ್ತಿದ್ದಾರೆ.

ಆ) ಮೇಲಿನ ಯೋಜನೆಯ ಅನುಷ್ಟಾನದ ಮೂಲಕ ಅವಲಂಭಿತ ಗ್ರಾಮಗಳಿಗೆ ಕುಡಿಯುವ ನೀರಿನ ಪೂರೈಕೆ ಆಗುತ್ತದೆ.